RW - 3

ದಿನಾಂಕಃ 18.02.2026 ರಂದು ಸಾಕ್ಷಿಗೆ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಅರ್ಜಿದಾರರ ಪರ ವಕೀಲರಿಂದ -

ಕೆಎ 17 ಇ ಎನ್ 4682 ಈ ಬೈಕು ನನ್ನ ಮಾಲೀಕತ್ವದ್ದಾಗಿದ್ದು ನಾನೇ ಅದನ್ನು ಓಡಿಸುತ್ತಿದ್ದೆ ಎಂದರೆ ಸರಿ. ನಾನು ಪೊಲೀಸ್ ದಾಖಲೆಗಳ ಬಗ್ಗೆ ಪೂರ್ಣವಾಗಿ ತಿಳಿದುಕೊಂಡಿದ್ದೇನೆ. ಪೊಲೀಸರು ನನ್ನ ತಪ್ಪಿನಿಂದ ಅಪಘಾತವಾಗಿದೆ ಎಂದು ಅಂತಿಮ ವರದಿ ಸಲ್ಲಿಸಿದ್ದಾರೆ ಎಂದರೆ ಸರಿ. ಆದರೆ ಅವರು ಹೇಳಿದ ಜಾಗ ತಪ್ಪಾಗಿದೆ ನಾನು ಎಡಭಾಗದಲ್ಲಿಯೇ ನಿಂತಿದ್ದೆ. ಅಪಘಾತದ ಬಗ್ಗೆ ನಮ್ಮ ಮನೆಯವರು ದೂರು ನೀಡಿದ್ದಾರೆ. ದೂರಿನಲ್ಲಿ ನಾನು ನಿಂತುಕೊಂಡಿದ್ದೆ ಎಂದು ನಮೂದು ಮಾಡಿರುವುದಿಲ್ಲ. ಸದರಿ ಅಂತಿಮ ವರದಿಯ ಅನುಸಾರ ಜೆ ಎಂ ಎಫ್ ಸಿ ನ್ಯಾಯಾಲಯದಲ್ಲಿ ನಾನು ತಪ್ಪನ್ನು ಒಪ್ಪಿಕೊಂಡು ದಂಡ ಕಟ್ಟಿದ್ದೇನೆ ಎಂದರೆ ಸರಿ. ಆದರೆ ಅಗ ಕರೋನಾ ಇದಿದ್ದ ಕಾರಣ ಕಾಲಿಗೆ ಪೆಟ್ಟಾಗಿದ್ದು ನ್ಯಾಯಾಲಯಕ್ಕೆ ಬರಲು ಆಗುವುದಿಲ್ಲ ಎಂದು ದಂಡಕಟ್ಟಿ ಪ್ರಕರಣ ಮುಗಿಸಿದ್ದೇನೆ ಎಂದು ಉತ್ತರಿಸಿರುತ್ತಾರೆ. ಅಂತಿಮ ವರದಿ ಪ್ರಶ್ನಿಸಿ ನಾನು ಯಾವುದೇ ಖಾಸಗಿ ದೂರು ಸಲ್ಲಿಸಿರುವುದಿಲ್ಲ. ವಾಹನವನ್ನು ಪೊಲೀಸ್ ಠಾಣೆಯಿಂದ ಹಿಂಪಡೆಯುವಾಗ ಬರೆದುಕೊಟ್ಟ ಇಂಡೆಮಿನಿಟಿ ಬಾಂಡ್ನಲ್ಲಿ ನನ್ನ ತಂದೆ ಮಾಲೀಕತ್ವದಲ್ಲಿದ್ದ ಬೈಕನ್ನು ನಾನೇ ಉಪಯೋಗಿಸುತ್ತಿದ್ದೆ ಎಂದು ಬರೆದಿದ್ದೇನೆ ಎಂದರೆ ಸರಿ. ನನ್ನ ತಪ್ಪಿನಿಂದ ಅಪಘಾತವಾಗಿದ್ದರೂ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3 ನೇ ಎದುರುದಾರರು ಪಾಟೀ ಸವಾಲಿಗೆ ಸಮಯ ಕೋರಿದ್ದು ನೀಡಲಾಯಿತು.
(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ.ಸ.ಇದೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿಜೆಎಂ
ನ್ಯಾಯಾಲಯ, ದಾವಣಗೆರೆ